37 Nirani	2580	-	-	-	-	-
38 Prabhull geshwara	131190	1312	692	620	1074	1694
39 Renuka	295800	963	-	963	-	963
40 S.C.M	96330	915	589	326	-	326
41 Shamnur	135070	912	380	532	-	532
42 Sirguppa(G)	-	-	-	-	423	423
43 Siraguppa(D)	-	-	-	-	-	-
44 Sundari	-	-	-	-	-	-
45 Ugar	746043	9066	7709	1357	13	1370
46 Venateshwar	205485	2054	959	1095	1769	2864
Sub-Total-IV	**3206298**	**30126**	**19209**	**10917**	**486**	**415781**
Grand Total :	5354873	51617	33172	18445	12342	30787

403(1098) : ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ(ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಪರಿಶಿಷ್ಟ ಜಾತಿ(ಎಸ್.ಸಿ) ವಿದ್ಯಾರ್ಥಿಗಳಿರುವ ಸರ್ಕಾರಿ ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಸಂಖ್ಯೆ ಎಷ್ಟು :

ಆ) ಹೊಸದಾಗಿ ವಸತಿ ನಿಲಯಗಳನ್ನು ಪ್ರಾರಂಭಿಸುವ ಅಗತ್ಯತೆ ಸರ್ಕಾರದ ಗಮನದಲ್ಲಿದೆಯೇ:

ಇ) ಹಾಗಿದ್ದಲ್ಲಿ, ಮೆಟ್ರಿಕ್ ಪೂರ್ವ ವಸತಿ ನಿಲಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 54 ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿವೆ.

ಆ) ಹೌದು.

ಇ) ಅನುದಾನದ ಲಭ್ಯತೆಗೊಳಪಟ್ಟ ಹೊಸ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.

404(1099) : ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸಭಾ ಮತಕ್ಷೇತ್ರಕ್ಕೊಂದು ಕಸ್ತೂರಿ ಬಾಲಕಿಯರ ವಸತಿ ಪ್ರೌಢಶಾಲೆ ಮಂಜೂರಾತಿ ನೀಡುವ ಬಗ್ಗೆ ಸರ್ಕಾರ ಗಮನಹರಿಸಿದೆಯೇ :

ಆ) ಹಾಗಿದ್ದಲ್ಲಿ, ಈ ವಸತಿ ಪ್ರೌಢ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಗ್ರಾಮೀಣ ಮಹಿಳೆಯರ ಸಾಕ್ಷರತೆ ಪ್ರಮಾಣ ರಾಷ್ಟ್ರೀಯ ಸರಾಸರಿ 46.13% ಕ್ಕಿಂತ ಕಡಿಮೆ ಇರುವ ಮತ್ತು ಮಹಿಳೆ ಹಾಗೂ ಪುರುಷ ಸಾಕ್ಷರತೆಯಲ್ಲಿನ ಅಂತರವು ರಾಷ್ಟ್ರೀಯ ಸರಾಸರಿ